Akashvani : Bangalore
National Bulletin In Kannada
20.04.2024: 7.35AM

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

20.04.2024: 7.35AM

*******

**ಮುಖ್ಯಾಂಶಗಳು:**

1. ಲೋಕಸಭಾ ಚುನಾವಣೆಯ ಮೊದಲ ಹಂತದಲ್ಲಿ ಶೇಕಡ ೬೨.೩೭ಕ್ಕಿಂತ ಹೆಚ್ಚಿನ ಮತದಾನ
2. ಮೊದಲ ಹಂತದ ಚುನಾವಣೆಯಲ್ಲಿ ಮತದಾರರಿಂದ ಉತ್ತಮ ಪ್ರತಿಕ್ರಿಯೆ - ಪ್ರಧಾನಮಂತ್ರಿ ನರೇಂದ್ರ ಮೋದಿ
3. ಮೂರನೇ ಹಂತದ ಚುನಾವಣೆಗೆ ನಾಮಪತ್ರ ಸಲ್ಲಿಕೆ ಮುಕ್ತಾಯ; ಕರ್ನಾಟಕದಲ್ಲಿ ೧೪ ಸ್ಥಾನಗಳಿಗಾಗಿ ೩೩೭ ಅಭ್ಯರ್ಥಿಗಳು ಚುನಾವಣಾ ಕಣದಲ್ಲಿ
4. ಐಪಿಎಲ್ ಟಿ ೨೦ ಕ್ರಿಕೆಟ್; ನಿನ್ನೆ ನಡೆದ ಪಂದ್ಯದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ತಂಡಕ್ಕೆ ಚೆನ್ನೈ ಸೂಪರ್ ಕಿಂಗ್ಸ್ ತಂಡದ ವಿರುದ್ಧ ೮ ವಿಕೆಟ್ ಜಯ

*****

ನಿನ್ನೆ ನಡೆದ ಲೋಕಸಭೆ ಚುನಾವಣೆಯ ಮೊದಲ ಹಂತದಲ್ಲಿ ಮತದಾನ ನಡೆದ ೧೦೨ ಲೋಕಸಭಾ ಕ್ಷೇತ್ರಗಳಲ್ಲಿ ರಾತ್ರಿ ೯ ಗಂಟೆಯವರೆಗೆ ಶೇಕಡಾ ೬೨.೩೭ ಕ್ಕಿಂತ ಹೆಚ್ಚಿನ ಮತದಾನವಾಗಿದೆ ಎಂದು ವರದಿಯಾಗಿದೆ. ಬೇಸಿಗೆಯ ರುಬಿಸಿಲಿನ ನಡುವೆಯೂ ಮತದಾರರು ಉತ್ಸಾಹದಿಂದ ತಮ್ಮ ಮತ ಚಲಾಯಿಸಿದರು., ಮತದಾನ ಶಾಂತಿಯುತವಾಗಿತ್ತು. ೧೦೨ ಲೋಕಸಭಾ ಕ್ಷೇತ್ರಗಳ ಪೈಕಿ ೧೧ ಲೋಕಸಭಾ ಸ್ಥಾನಗಳು ಪರಿಶಿಷ್ಠ ಪಂಗಡಕ್ಕೆ ಮತ್ತು ೧೮ ಸ್ಥಾನಗಳು ಪರಿಶಿಷ್ಠ ಜಾತಿಗೆ ಮೀಸಲಾಗಿದೆ. ಈ ಕ್ಷೇತ್ರಗಳು ೧೭ ರಾಜ್ಯಗಳು ಮತ್ತು ನಾಲ್ಕು ಕೇಂದ್ರಾಡಳಿತ ಪ್ರದೇಶಗಳಲ್ಲಿ ಹರಡಿವೆ. ಇವುಗಳಲ್ಲಿ ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ, ಅಸ್ಸಾಂ, ಮಧ್ಯಪ್ರದೇಶ, ಮಹಾರಾಷ್ಟ್ರ, ರಾಜಸ್ಥಾನ, ತಮಿಳುನಾಡು, ಉತ್ತರಾಖಂಡ, ಅರುಣಾಚಲ ಪ್ರದೇಶ, ಮಣಿಪುರ ಮತ್ತು ಮೇಘಾಲಯ ಸೇರಿವೆ. ಪಶ್ಚಿಮ ಬಂಗಾಳದ ಮೂರು ಲೋಕಸಭಾ

ಸ್ಥಾನಗಳಲ್ಲಿ ಅತಿ ಹೆಚ್ಚು ಅಂದರೆ ಶೇಕಡ ೭೭.೫೭, ಉತ್ತರಪ್ರದೇಶದ ೮ ಸ್ಥಾನಗಳಲ್ಲಿ ಶೇಕಡ ೫೮.೪೯, ಬಿಹಾರದ ನಾಲ್ಕು ಸ್ಥಾನಗಳಲ್ಲಿ ಶೇಕಡ ೪೮.೫೦, ರಾಜಸ್ತಾನದ ೮ ಸ್ಥಾನಗಳಲ್ಲಿ ಶೇಕಡ ೫೬.೫೮, ಮಹಾರಾಷ್ಟ್ರದ ೫ ಸ್ಥಾನಗಳಲ್ಲಿ ಶೇಕಡ ೫೫.೩೫, ಅಸ್ಸಾಂನ ೫ ಸ್ಥಾನಗಳಲ್ಲಿ ಶೇಕಡ ೭೨.೧೦ ಹಾಗೂ ತಮಿಳುನಾಡಿನ ಎಲ್ಲಾ ೩೯ ಸ್ಥಾನಗಳಲ್ಲಿ ಮತದಾನದ ಪ್ರಮಾಣ ಶೇಕಡ ೬೫.೧೯ರಷ್ಟಿತ್ತು. ಉತ್ತರಾಖಂಡದಲ್ಲಿ ೫ ಸ್ಥಾನಗಳಲ್ಲಿ ಶೇಕಡ ೫೪.೦೬, ಛತ್ತೀಸ್‌ಗಢದ ಒಂದು ಸ್ಥಾನದಲ್ಲಿ ಶೇಕಡ ೬೩.೪೧ ಹಾಗೂ ತ್ರಿಪುರಾದ  ಒಂದು ಲೋಕಸಭಾ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಶೇಕಡ ೮೦.೧೭ರಷ್ಟು ಮತದಾನವಾಗಿದೆ. ಈ ಹಂತದಲ್ಲಿ ಒಟ್ಟು ೧೬೨೫ ಅಭ್ಯರ್ಥಿಗಳು ಕಣದಲ್ಲಿದ್ದರು.  ಈ ಪೈಕಿ ಬಿಜೆಪಿಯ ಹಿರಿಯ ನಾಯಕರು ಮತ್ತು ಕೇಂದ್ರ ಸಚಿವರುಗಳಾದ ನಿತಿನ್ ಗಡ್ಕರಿ, ಸರ್ಬಾನಂದ ಸೋನೋವಾಲ್, ಕಿರಣ್ ರಿಜಿಜು, ಡಾ. ಜಿತೇಂದ್ರ ಸಿಂಗ್, ಸಂಜೀವ್ ಬಾಲ್ಯನ್ ಹಾಗೂ ಬಿಜೆಪಿ ಮುಖಂಡರಾದ ತಮಿಳ್‌ಸಾಯ್ ಸೌಂದರ್ಯ ರಾಜನ್ ಹಾಗೂ ಜಿತಿನ್ ಪ್ರಸಾದ, ಕಾಂಗ್ರೆಸ್ ನಾಯಕರಾದ ಗೌರವ್ ಗೊಗೋಯ್, ಕಾರ್ತಿ ಚಿದಂಬರಂ, ನಕುಲ್‌ನಾಥ್ ಮತ್ತು ಡಿಎಂಕೆಯ ದಯಾನಿದಿ ಮಾರನ್ ಸೇರಿದ್ದಾರೆ. ಈ ಮಧ್ಯೆ, ಮೊದಲ ಹಂತದ ಚುನಾವಣೆಯಲ್ಲಿ ಮತದಾನಕ್ಕೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದ್ದಾರೆ. ಮತ ಚಲಾಯಿಸಿದ ಎಲ್ಲರಿಗೂ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಅವರು ಧನ್ಯವಾದ ಹೇಳಿದ್ದಾರೆ.

*****

ಲೋಕಸಭಾ ಚುನಾವಣೆಯ ಇತರ ಹಂತಗಳಿಗಾಗಿ ಪ್ರಚಾರ ದಿನೇ ದಿನೇ ಕಾವೇರುತ್ತಿದೆ. ರಾಜಕೀಯ ಪಕ್ಷಗಳ ಹಿರಿಯ ನಾಯಕರು ದೇಶದ ವಿವಿಧ ಭಾಗಗಳಲ್ಲಿ ರ್‍ಯಾಲಿಗಳು ಹಾಗೂ ರೋಡ್ ಶೋಗಳನ್ನು ನಡೆಸುತ್ತಿದ್ದಾರೆ. ನಿನ್ನೆ ಮಧ್ಯಪ್ರದೇಶದ ಧಾಮೋಹ್ ಹಾಗೂ ಮಹಾರಾಷ್ಟ್ರದ ವಾರ್ಧಾದಲ್ಲಿ ಚುನಾವಣಾ ಸಭೆಗಳನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ ಹಾಗೂ ಹಿರಿಯ ಬಿಜೆಪಿ ನಾಯಕ ನರೇಂದ್ರ ಮೋದಿ ಈ ಚುನಾವಣೆಯು ದೇಶದ ಭವಿಷ್ಯವನ್ನು ಖಾತರಿಪಡಿಸಲಿದೆ ಮತ್ತು ಮುಂಬರು ಐದು ವರ್ಷಗಳಲ್ಲಿ ದೇಶವನ್ನು ವಿಶ್ವದಲ್ಲೇ ಬಲಿಷ್ಠ ಶಕ್ತಿಯನ್ನಾಗಿಸಲಿದೆ ಎಂದರು.

*****

ಮೂರನೇ ಹಂತದ ಲೋಕಸಭಾ ಚುನಾವಣೆಗೆ ನಾಮಪತ್ರಗಳ ಸಲ್ಲಿಕೆ ಪ್ರಕ್ರಿಯೆ ನಿನ್ನೆ ಮುಕ್ತಾಯಗೊಂಡಿತು. ಈ ಹಂತದಲ್ಲಿ ಮುಂದಿನ ತಿಂಗಳ ೭ರಂದು ೧೦ ರಾಜ್ಯಗಳು ಮತ್ತು ೨ ಕೇಂದ್ರಾಡಳಿತ ಪ್ರದೇಶಗಳಲ್ಲಿನ ೯೪ ಲೋಕಸಭಾ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಇಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರಗಳನ್ನು ಹಿಂಪಡೆಯಲು ಇದೇ ಸೋಮವಾರ ಕೊನೆಯ ದಿನವಾಗಿದೆ.

*****

ಕರ್ನಾಟಕದಲ್ಲಿ ಮೂರನೇ ಹಂತದ ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಕೆಗೆ ಕೊನೆಯ ದಿನಾಂಕ ಮುಗಿದಿದ್ದು, ೧೪ ಸ್ಥಾನಗಳಿಗಾಗಿ ಒಟ್ಟು ೩೩೭ ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಮುಖ್ಯ ಚುನಾವಣಾ ಕಚೇರಿ ಬಿಡುಗಡೆ ಮಾಡಿದ ಅಂಕಿಅಂಶಗಳ ಪ್ರಕಾರ, ಈ ಹಂತಕ್ಕೂ ನಾಮಪತ್ರ ಸಲ್ಲಿಕೆ ಪ್ರಾರಂಭವಾದ ಇದೇ ೧೨ ರಿಂದ ೩೦೯ ಪುರುಷ ಮತ್ತು ೨೮ ಮಹಿಳಾ ಅಭ್ಯರ್ಥಿಗಳು ೫೦೩ ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ಪರಿಶಿಷ್ಟ ಪಂಗಡಕ್ಕೆ ಮೀಸಲಾದ ಸ್ಥಾನವಾದ ದಾವಣಗೆರೆಯಿಂದ ಅತಿ ಹೆಚ್ಚು ೪೦ ಅಭ್ಯರ್ಥಿಗಳು ಮತ್ತು ಕನಿಷ್ಠ ೧೧ ಅಭ್ಯರ್ಥಿಗಳು ಬಳ್ಳಾರಿಯಿಂದ ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಹಿಂಪಡೆಯಲು ಇದೇ ೨೨ ಕೊನೆಯ ದಿನವಾಗಿದ್ದು, ಮೇ ೭ ರಂದು ಚುನಾವಣೆ ನಡೆಯಲಿದೆ. ಶೋರಾಪುರ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಕಾಂಗ್ರೆಸ್, ಬಿಜೆಪಿ, ಸಮಾಜವಾದಿ ಜನತಾ ಪಕ್ಷ ಮತ್ತು ನಾಲ್ವರು ಪಕ್ಷೇತರರು ಸೇರಿದಂತೆ ಏಳು ಅಭ್ಯರ್ಥಿಗಳು ಈ ಕ್ಷೇತ್ರದಿಂದ ಸ್ಪರ್ಧಿಸಲು ನಾಮಪತ್ರ ಸಲ್ಲಿಸಿದ್ದಾರೆ.

ಕಾಂಗ್ರೆಸ್ ಶಾಸಕ ರಾಜಾ ವೆಂಕಟಪ್ಪ ನಾಯ್ಕ್ ನಿಧನದಿಂದ ಯಾದಗಿರಿ ವಿಧಾನಸಭಾ ಕ್ಷೇತ್ರ ತೆರವಾಗಿತ್ತು. ೧೪ ಲೋಕಸಭಾ ಸ್ಥಾನಗಳಿಗೆ ೨ನೇ ಹಂತದ ಚುನಾವಣೆಗೆ ಮನೆಯಿಂದಲೇ ಮತದಾನ ಮಾಡುವ ಪ್ರಕ್ರಿಯೆ ಮುಕ್ತಾಯವಾಗಿದೆ. ಮನೆಯಿಂದಲೇ ಮತದಾನ ಮಾಡುವುದನ್ನು ಆಯ್ಕೆ ಮಾಡಿಕೊಂಡಿದ್ದ ೩೬,೬೮೯ ಮತದಾರರ ಪೈಕಿ ೮೫ ವರ್ಷ ಮೇಲ್ಪಟ್ಟ ೩೫,೧೩೧ ಮತದಾರರ ಮನೆಗಳಿಗೆ ಮತಗಟ್ಟೆ ಸಿಬ್ಬಂದಿಗಳು ಯಶಸ್ವಿಯಾಗಿ ತೆರಳಿ ಗುಪ್ತ ಮತದಾನಕ್ಕೆ ವ್ಯವಸ್ಥೆ ಮಾಡಿದರು. ಅಂತೆಯೇ, ಸುಮಾರು ೯೬ ಪ್ರತಿಶತ ವಿಶೇಷ ಚೇತನ ಮತದಾರರು ತಮ್ಮ ಮನೆಗಳಿಂದಲೇ ಮತದಾನ ಮಾಡಿದರು. ಎರಡೂ ವಿಭಾಗಗಳಲ್ಲಿ ಒಟ್ಟು ೪೬,೮೧೦ ಮತದಾರರು ತಮ್ಮ ಮನೆಗಳಿಂದಲೇ ತಮ್ಮ ಹಕ್ಕು ಚಲಾಯಿಸಿದ್ದಾರೆ.

*****

ಬಿಜೆಪಿಯ ಹಿರಿಯ ನಾಯಕ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ, ಗಾಂಧಿನಗರ ಲೋಕಸಭಾ ಸ್ಥಾನದಿಂದ ನಾಮಪತ್ರ ಸಲ್ಲಿಸಿದ್ದಾರೆ. ಮತ್ತೊಂದೆಡೆ ಕಾಂಗ್ರೆಸ್‌ನ ಹಿರಿಯ ನಾಯಕ ಪರೇಶ್ ಧನಾನಿ ಅವರು ರಾಜ್‌ಕೋಟ್ ಲೋಕಸಭಾ ಸ್ಥಾನದಿಂದ ತಮ್ಮ ನಾಮಪತ್ರ ಸಲ್ಲಿಸಿದ್ದಾರೆ. ಮೇ ೭ ರಂದು ಮೂರನೇ ಹಂತದಲ್ಲಿ ಗುಜರಾತ್‌ನಲ್ಲಿ  ಮತದಾನ ನಡೆಯಲಿದೆ.

*****

ಕಳೆದ ದಶಕಗಳಲ್ಲಿ ತಮ್ಮ ಪಕ್ಷದ ಸರ್ಕಾರ ಭ್ರಷ್ಟಾಚಾರದಿಂದ ಮುಕ್ತವಾಗಿದೆ ಎಂದು ರಕ್ಷಣಾ ಸಚಿವ ಮತ್ತು ಭಾರತೀಯ ಜನತಾ ಪಕ್ಷದ ಹಿರಿಯ ನಾಯಕ ರಾಜನಾಥ್ ಸಿಂಗ್ ಹೇಳಿದ್ದಾರೆ. ತೆಲಂಗಾಣದ ಸಿಕಂದರಾಬಾದ್‌ನಲ್ಲಿ ನಡೆದ ಚುನಾವಣಾ ರಾಲಿಯಲ್ಲಿ ಮಾತನಾಡಿದ ರಾಜನಾಥ್ ಸಿಂಗ್, ರಾಷ್ಟ್ರ ನಿರ್ಮಾಣಕ್ಕೆ ಈ ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು. ಕಾಂಗ್ರೆಸ್ ಪಕ್ಷವನ್ನು ಟೀಕಿಸಿದ ಅವರು ದೇಶದ ರಾಜಕೀಯ ಸನ್ನಿವೇಶದಲ್ಲಿ ಕಾಂಗ್ರೆಸ್ ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿದೆ ಎಂದು ಹೇಳಿದರು. ಬಿಜೆಪಿ ರಾಜಕೀಯ ಮಾಡುವುದು ಕೇವಲ ಅಧಿಕಾರಕ್ಕಾಗಿ ಮಾತ್ರವಲ್ಲ, ರಾಷ್ಟ್ರ ನಿರ್ಮಾಣಕ್ಕಾಗಿ ಎಂದು ರಾಜನಾಥ್ ಸಿಂಗ್ ಪುನರುಚ್ಚರಿಸಿದರು. ಮೋದಿಯವರು ಪ್ರಧಾನ ಮಂತ್ರಿಯಾದ ಈ ವರ್ಷಗಳಲ್ಲಿ, ದೇಶವು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಾಗಿದೆ ಎಂದು ರಾಜನಾಥ್ ಸಿಂಗ್ ಹೇಳಿದರು. ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ, ೩೭೦ನೇ ವಿಧಿ ರದ್ದತಿ, ತ್ರಿವಳಿ ತಲಾಖ್ ರದ್ದತಿ ಮುಂತಾದ ಎಲ್ಲ ಭರವಸೆಗಳನ್ನು ಬಿಜೆಪಿ ಈಡೇರಿಸಿದೆ ಎಂದರು. ಸಿಎಎಗೆ ಸಂಬಂಧಿಸಿದ ಆರೋಪಗಳನ್ನು ತಿರಸ್ಕರಿಸಿದ ಅವರು, ಅದರ ಅಡಿಯಲ್ಲಿ ದೇಶದ ಅಲ್ಪಸಂಖ್ಯಾತರು ತಮ್ಮ ಪೌರತ್ವವನ್ನು ಕಳೆದುಕೊಳ್ಳುವುದಿಲ್ಲ ಎಂದು ಹೇಳಿದರು.

*****

ಲೋಕಸಭಾ ಚುನಾವಣೆಗಳಿಗಾಗಿ ಬಿಎಸ್‌ಪಿ ತನ್ನ ೬ನೇ ಪಟ್ಟಿಯನ್ನು ಬಿಡುಗಡೆ ಮಾಡಿದೆ. ೧೧ ಅಭ್ಯರ್ಥಿಗಳ ಹೆಸರುಗಳನ್ನು ಪಕ್ಷ ಪ್ರಕಟಿಸಿದೆ. ಬಿಎಸ್‌ಪಿ ವಾರಾಣಸಿಯಿಂದ ಪ್ರಧಾನಮಂತ್ರಿ ಮೋದಿ ಅವರ ವಿರುದ್ಧ ತನ್ನ ಅಭ್ಯರ್ಥಿಯನ್ನು ಬದಲಾಯಿಸಿದೆ. ವಾರಾಣಸಿಯಿಂದ ಅಥರ್ ಜಮಾಲ್ ಲಾರಿ ಅವರ ಬದಲಿಗೆ ಸೈಯದ್ ನಿಯಾಜ್ ಅಲಿ ಅವರಿಗೆ ಪಕ್ಷ ಟಿಕೆಟ್ ನೀಡಿದೆ. ಹರ್ದೋಯಿ ಮೀಸಲು ಸ್ಥಾನಕ್ಕೆ ಭೀಮ್‌ರಾವ್ ಅಂಬೇಡ್ಕರ್ ಹೆಸರನ್ನು ಮತ್ತು ಸಂತ್ ಕಬೀರ್

ನಗರ್‌ನಿಂದ ಮೊಹಮ್ಮದ್ ಆಲಂ ಹಾಗೂ ಫತೇಪುರ್‌ನಿಂದ ಡಾ. ಮನೀಶ್ ಸಿಂಗ್ ಸಚ್ಚನ್ ಅವರನ್ನು ಹೆಸರಿಸಿದೆ. ಫಿರೋಜಾಬಾದ್‌ನಿಂದ ತನ್ನ ಅಭ್ಯರ್ಥಿಯನ್ನು ಕೂಡ ಬಿಎಸ್‌ಪಿ ಬದಲಾಯಿಸಿದೆ. ಈ ಸ್ಥಾನದಲ್ಲಿ ಪಕ್ಷ ಚೌಧರಿ ಬಷೀರ್ ಅವರನ್ನು ಹೆಸರಿಸಿದೆ.

*****

ಈ ತಿಂಗಳ ೧೪ರಿಂದ ೧೬ರ ವರೆಗೆ ಮೂರು ದಿನಗಳ ಅವಧಿಯಲ್ಲಿ ಸುಮಾರು ೨ ಕೋಟಿ ಲ೬ ಲಕ್ಷ ಪ್ರಯಾಣಿಕರು ದೂರದ ಸ್ಥಳಗಳಿಗೆ ರೈಲಿನಲ್ಲಿ ಪಯಣಿಸಿದ್ದಾರೆ ಎಂದು ಭಾರತೀಯ ರೈಲ್ವೆ ಹೇಳಿದೆ. ಬೇಸಿಗೆಯಲ್ಲಿ ಪ್ರಯಾಣಿಕರ ದಟ್ಟಣೆಯನ್ನು ನಿವಾರಿಸಲು ಏಪ್ರಿಲ್ ೧ ರಿಂದ ೩೦ ಜೂನ್ ವರೆಗೆ ಭಾರತೀಯ ರೈಲ್ವೆ ಹೆಚ್ಚುವರಿಯಾಗಿ ೯ ಸಾವಿರದ ೧೧೧ ಹೆಚ್ಚುವರಿ ಸಂಚಾರ ಸೇವೆ ಒದಗಿಸುತ್ತಿದೆ. ಈ ತಿಂಗಳ ೧೫ರ ವರೆಗೆ ಒಂದು ಕೋಟಿಗಿಂತಲೂ ಹೆಚ್ಚು ಪ್ರಯಾಣಿಕರು ಈ ಸೇವೆಯ ಸೌಲಭ್ಯ ಪಡೆದುಕೊಂಡಿದ್ದಾರೆ.

*****

ಹವಾಮಾನ ಇಲಾಖೆಯು ಮುಂದಿನ ಕೆಲವು ದಿನಗಳವರೆಗೆ ದೇಶದ ಪೂರ್ವ ಮತ್ತು ದಕ್ಷಿಣ ಪ್ರದೇಶಗಳಲ್ಲಿ ತೀವ್ರ ಬಿಸಿಲಿನ ಮುನ್ಸೂಚನೆ ನೀಡಿದೆ. ಒಡಿಶಾ, ಜಾರ್ಖಂಡ್, ಪಶ್ಚಿಮ ಬಂಗಾಳದ ಗಂಗಾನದಿ ಪ್ರದೇಶ, ಬಿಹಾರ, ಕರಾವಳಿ ಆಂಧ್ರಪ್ರದೇಶ, ಯಾನಂ, ರಾಯಲಸೀಮಾ, ತೆಲಂಗಾಣ ಮತ್ತು ತಮಿಳುನಾಡಿನ ಕೆಲವು ಪ್ರದೇಶಗಳಲ್ಲಿ ಮಂಗಳವಾರದವರೆಗೆ ಬಿಸಿ ಗಾಳಿ ಬೀಸಲಿದೆ. ಒಡಿಶಾದ ವಿವಿಧ ಭಾಗಗಳಲ್ಲಿ ಮತ್ತು ಪಶ್ಚಿಮ ಬಂಗಾಳದ ಗಂಗಾನದಿ ಪ್ರದೇಶಗಳಲ್ಲಿ ಸೋಮವಾರದವರೆಗೆ ಈ ಶಾಖದ ಅಲೆ ಮುಂದುವರಿಯುತ್ತದೆ. ಮುಂದಿನ ಮೂರ್ನಾಲ್ಕು ದಿನಗಳ ಕಾಲ ವಾಯುವ್ಯ ಮತ್ತು ಈಶಾನ್ಯ ಭಾರತದಲ್ಲಿ ಗುಡುಗು ಸಹಿತ ಭಾರೀ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಸೋಮವಾರದವರೆಗೆ ಜಮ್ಮು ಮತ್ತು ಕಾಶ್ಮೀರ, ಲಡಾಖ್, ಗಿಲ್ಗಿಟ್, ಬಾಲ್ಟಿಸ್ತಾನ್, ಮುಜಫರಾಬಾದ್, ಹಿಮಾಚಲ ಪ್ರದೇಶ, ಉತ್ತರಾಖಂಡ, ಪಂಜಾಬ್, ಹರಿಯಾಣ, ಚಂಡಿಗಢ, ರಾಜಸ್ಥಾನ ಮತ್ತು ಪಶ್ಚಿಮ ಉತ್ತರ ಪ್ರದೇಶದಲ್ಲಿ ಗಂಟೆಗೆ ೪೦ ಕಿಮೀ ವೇಗದಲ್ಲಿ ಗಾಳಿಯೊಂದಿಗೆ ಸಾಧಾರಣದಿಂದ ಸಾಧಾರಣ ಮಳೆಯಾಗುವ ನಿರೀಕ್ಷೆಯಿದೆ.

ಮುಂದಿನ ಕೆಲವು ದಿನಗಳ ಕಾಲ ದೆಹಲಿಯಲ್ಲಿ ಬಲವಾದ ಗಾಳಿ ಮತ್ತು ಸಾಮಾನ್ಯವಾಗಿ ತುಂತುರು ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

*****

ಲಖನೌದ ಏಕಾನಾ ಇಂಟರ್ ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಿನ್ನೆ ನಡೆದ ಐಪಿಎಲ್ ಟಿ ೨೦ ಕ್ರಿಕೆಟ್ ಪಂದ್ಯದಲ್ಲಿ ಲಕ್ನೋ ಸೂಪರ್ ಜೈಂಟ್ಸ್ ತಂಡ ಚೆನ್ನೈ ಸೂಪರ್ ಕಿಂಗ್ಸ್ ತಂಡದ ವಿರುದ್ಧ ೮ ವಿಕೆಟ್ ಜಯ ಗಳಿಸಿದೆ. ಮೊದಲು ಟಾಸ್ ಗೆದ್ದ ಲಕ್ನೋ ಸೂಪರ್ ಜೈಂಟ್ಸ್ ತಂಡ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ ತಂಡ ನಿಗದಿತ ೨೦ ಓವರ್ ಗಳಲ್ಲಿ ೬ ವಿಕೆಟ್ ನಷ್ಟಕ್ಕೆ ೧೭೬ ರನ್ ಗಳಿಸಿತ್ತು. ೧೭೭ ರನ್ ಗೆಲುವಿನ ಗುರಿ ಬೆನ್ನತ್ತಿದ್ದ ಲಕ್ನೋ ಸೂಪರ್ ಜೈಂಟ್ಸ್ ತಂಡ ಇನ್ನೂ ಆರು ಎಸೆತಗಳು ಬಾಕಿ ಇರುವಂತೆಯೇ ಗುರಿ ಮುಟ್ಟಿ ಎಂಟು ವಿಕೆಟ್ ಜಯ ಗಳಿಸಿತು. ಲಕ್ನೋ ತಂಡದಲ್ಲಿ ಕೆ ಎಲ್ ರಾಹುಲ್ ೫೩ ಎಸೆತಗಳಲ್ಲಿ ೮೨ ರನ್ ಗಳಿಸಿದರೆ ಚೆನ್ನೈ ತಂಡದಲ್ಲಿ ರವೀಂದ್ರ ಜಡೇಜಾ ೪೦ ಎಸೆತಗಳಲ್ಲಿ ೫೭ ರನ್ ಗಳಿಸಿದರು. ಕೆ ಎಲ್ ರಾಹುಲ್ ಅವರು ಪಂದ್ಯ ಶ್ರೇಷ್ಠ ಎನಿಸಿದರು. ಇಂದು ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡ ಹಾಗೂ ಸನ್ ರೈಸರ್ಸ್ ಹೈದರಾಬಾದ್ ತಂಡಗಳು ಮುಖಾಮುಖಿಯಾಗಲಿವೆ. ಪಂದ್ಯ ರಾತ್ರಿ ೭.೩೦ ಕ್ಕೆ ಆರಂಭವಾಗಲಿದೆ.

***END***